ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಇಂಡಿವಿಜ್ಯುಅಲ್ ಕೇಸಿನ್ ಮೇಲೆ ಹೋಗುತ್ತದೆ. ಕೆಲವು ನಲ ನಿಧಾನವಾಗುತ್ತದೆ. ಅಂಥ ಯಾವದಾದರೂ ಪರ್ಟಿಕ್ಯುಲರ್ ಕೇಸ್ ಇದ್ದರೆ ವಿಚಾರಣೆ ಮಾಡುತ್ತೇವೆ.

Sanctioning of a Government Medical College to Mangalore.

*Q.—1089. Sri A. KRISHNA SHETTY (Mangalore-II).—

Will the Government be pleased to state.—

(*a*) whether they are aware that the people of Mangalore are urging for sanctioning a Government Medical College to Mangalore;

(*b*) whether they intend sanctioning the same to the said place, in view of the necessary facilities available there?

A.—Sri K. NAGAPPA ALVA (Minister for Health).—

(*a*) Yes.
(*b*) No.

ಶ್ರೀ ಎ. ಕೃಷ್ಣ ಶೆಟ್ಟಿ.—ಮಂಗಳೂರಿನಲ್ಲಿ ಮೆಡಿಕಲ್ ಫ್ಯಾಸಿಲಿಟೀಸ್ ಸೌಕರ್ಯ ಇರುವುದರಿಂದ ಮೆಡಿಕಲ್ ಕಾಲೇಜ್ ಕೊಡುವುದಕ್ಕೆ ಇರುವ ತೊಂದರೆ ಏನು ಸ್ವಾಮಿ?

ಶ್ರೀ ಕೆ. ನಾಗಪ್ಪ ಆಳ್ವ.—ಮೆಡಿಕಲ್ ಫ್ಯಾಸಿಲಿಟೀಸ್ ಇದ್ದರೆ ಅಲ್ಲಿ ಮೆಡಿಕಲ್ ಕಾಲೇಜ್ ತರಬೇಕೆಂಬ ತೀರ್ಮಾನ ಏನೂ ಇಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಹಿಂದಿನ ಸರಕಾರ ಮಂಗಳೂರಿನಲ್ಲಿ ಕಾಲೇಜ್ ತೆರೆಯಬೇಕೆಂಬ ತೀರ್ಮಾನ ತೆಗೆದುಕೊಂಡಿಲ್ಲವೇ?

ಶ್ರೀ ಕೆ. ನಾಗಪ್ಪ ಆಳ್ವ.—ಕಾಲೇಜ್ ತೆರೆಯಬೇಕು ಎಂದು ಸರಕಾರ ತೀರ್ಮಾನ ತೆಗೆದು ಕೊಂಡಿಲ್ಲ.

Sri A. P. APPANNA.—May I know whether Government has any idea of opening any new Medical Colleges in the Malnad areas?

Sri K. NAGAPPA ALVA.—As it is, we have not thought over that.

ಶ್ರೀ ಎ. ಕೃಷ್ಣಶೆಟ್ಟಿ.—ಇಲ್ಲಿ ಕಾಲೇಜು ತೆರೆಯಬೇಕೆಂದು ಒಂದು ಅಭಿಪ್ರಾಯ ಸರ್ಕಾರದ ಮುಂದೆ ಇದೆ ಎಂದು ಮಾನ್ಯ ಮಂತ್ರಿಗಳು ಕೆಲವು ದಿನದ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದರೇ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ಕ್ಲಿನಿಕಲ್ ಫೆಸಿಲಿಟೀಸ್ ಇರುವುದರಿಂದ, ಮಂಗಳೂರಿನಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆಗೆಯುವುದಕ್ಕೆ ಎಲ್ಲಾ ಸೌಲತ್ತು ಇದೆ ಆದ್ದರಿಂದ ಕೇಂದ್ರ ಮತ್ತು ಮೆಡಿಕಲ್ ಕೌನ್ಸಿಲ್ ಜೊತೆಯಲ್ಲಿ ವ್ಯವಹಾರ ನಡೆಸಿ ಯಾವುದಾದರೂ ಒಂದು ತೀರ್ಮಾನಕ್ಕೆ ಬರುತ್ತೇವೆ ಎಂದು ಈ ಸಭೆಯ ಬಡ್ಜೆಟ್ ಅಧಿವೇಶನದ ಕಾಲದಲ್ಲಿ ಹಿಂದಿನ ಆರೋಗ್ಯ ಮಂತ್ರಿಗಳು ಹೇಳಿದ್ದು ಸರ್ಕಾರದ ದೃಷ್ಟಿಯಲ್ಲಿ ಇಲ್ಲವೇ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಷಯ ಇಲ್ಲ ಇಲ್ಲ.

Sri C. J. MUCKANNAPPA.—I wanted to know whether such a statement is made.

Mr. SPEAKER.—At the moment, he is not aware of it. If there is any, he will look into it.

ಶ್ರೀ ಎಸ್. ಗೋಪಾಲ ಸಾಲೆನ್ನ.—ಎಲ್ಲಾ ಸೌಲತ್ತುಗಳೂ ಅಲ್ಲಿ ಇರುವಾಗ ಮೆಡಿಕಲ್ ಕಾಲೇಜನ್ನು ತೆರೆಯಬೇಕಾದರೆ ಯಾವ ಒಂದು ತತ್ವದ ಮೇಲೆ ತೆರೆಯಬೇಕೆಂದು ತೀರ್ಮಾನ ಮಾಡುತ್ತೀರಾ? ಸೌತ್ ಕೆನರಾದ ಮೇಲೆ ಸಿಟ್ಟೇ?

ಶ್ರೀ ಕೆ. ನಾಗಪ್ಪ ಆಳ್ವ.—ಮೆಡಿಕಲ್ ಕಾಲೇಜುಗಳನ್ನು ತೆರೆಯುವ ವಿಷಯ-ಹಲವು ವಿಷಯಗಳನ್ನು ಆಲೋಚನೆಮಾಡಿ ಮಾಡಬೇಕಾಗುತ್ತದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದಿಂದ ಈ ತರಹ ಕಾಲೇಜುಗಳನ್ನು ತೆರೆಯಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಷ್ಟೆಲ್ಲಾ ಕ್ಲೆನಿಕಲ್‌ಫೆಸಿಲಿಟೀಸ್ ಇರುವಾಗ, ಮಾತ್ರವಲ್ಲದೇ ಸರ್ಕಾರಿ ಕಾಲೇಜಿಗೆ ತುಂಬಾ ಖರ್ಚಾಗುತ್ತಾ ಇರುವಾಗ ಅದಷ್ಟು ಬೇಗ ಇಲ್ಲಿ ಒಂದು ಕಾಲೇಜನ್ನು ತೆರೆಯುವಲಿಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ನಾನು ಈಗಾಗಲೇ ಹೇಳಿದೆ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದಿಂದ ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಿಲ್ಲ.

Sri Y. MANJAYA SHETTY.—Is ita fact that this Government has represented to the Central Government to locate the Regional Medical College intended for the Southern States, in Mangalore ?

Sri K. NAGAPPA ALVA.—We have represented to the Central Government that in this State the Regional College must be started.

ಶ್ರೀ ಕೆ. ಪಿ.ರೇವಣ್ಣಸಿದ್ದಪ್ಪ.—ಹಿಂದಿನ ಸರ್ಕಾರದಿಂದ ತಾವು ಚಾರ್ಜ್ ತೆಗೆದುಕೊಳ್ಳುವಾಗ ಮೆಮೊರ್ಯಾಂಡಂ ಆಫ್ ವರ್ಕ್ಸ್‌ನಲ್ಲಿ ಇದು ಸೇರಿರಲಿಲ್ಲವೇ ?

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆ ಏನು ? ಮೆಮೊರ್ಯಾಂಡಂ ಯಾವುದು ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಹೆಲ್ತ್ ಮಿನಿಸ್ಟರು ಚಾರ್ಜ್ ವಹಿಸಿಕೊಟ್ಟಾಗ ಮೆಮೊರ್ಯಾಂಡಂ ಆಫ್ ವರ್ಕ್ಸ್‌ನಲ್ಲಿ ಇದು ಸೇರಿರಲಿಲ್ಲವೇ, ಇಂತಿಂತಹ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಅದರಲ್ಲಿ ಇರಲಿಲ್ಲವೇ ?

(*No answer.*)

Sri C. J. MUCKANNAPPA.—Do Government consider locating the Regional Medical College at Mangalore ?

Sri K. NAGAPPA ALVA.—We will consider about that.

ಶ್ರೀ ಎ. ಕೃಷ್ಣ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನೂರಿ ಬಾ ಮೆಡಿಕಲ್ ಕಾಲೇಜು ಇದೆ, ಅದರ ಪ್ರಭಾವ ಸರ್ಕಾರದ ಮೇಲೆ ಬಿದ್ದಿದ್ದರಿಂದ ಇದನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ ಅಲ್ಲವೇ ?

Mr. SPEAKER.—The question is disallowed.

———

Donations made to the Mysore State Adult Education Council.

*Q.—1160. Sri C. R. RANGE GOWDA (Magadi).—

Will the Government be pleased to state :—

(*a*) when Sri L. S. Venkaji Rao, Sri H. S. Narayana Rao and Sri A. C. Deve Gowda have donated Rs. 5,000, Rs. 1,000 and Rs. 5,000 respectively to the Mysore State Adult Education Council and with what object ;

(*b*) whether any books are published in their names, and if so, the amount realised by the sale of these publications in each case ;

(*c*) whether any account is maintained separately for each of those donors, and if so, what is the balance out-standing ;

(*d*) whether it is a fact that the donors have complained that the object for which the amount is donated is not carried out ;

(*e*) whether these accounts are audited by the financial audit at any time and if so, with what result ?